## ಅಕ್ಟೋಬರ್ 2019, ಅಸಾಮಾನ್ಯ ಸುವಾರ್ತಾ ಸೇವಾ ತಿಂಗಳು

ಅಕ್ಟೋಬರ್ 22, 2017ನೇ ವಿಶ್ವ ಸುವಾರ್ತಾ ಭಾನುವಾರದಂದು ತ್ರಿಕಾಲ ಪ್ರಾರ್ಥನೆಯ ಸಂದರ್ಭದಲ್ಲಿ ವಿಶ್ವಗುರು ಫ್ರಾನ್ಸಿಸರು ಇಡೀ ಧರ್ಮಸಭೆಗೆ ಬಹಿರಂಗವಾಗಿ ಪ್ರಕಟಿಸುತ್ತಾ ತಾವು ಅಕ್ಟೋಬರ್ 2019ನ್ನು ಅಸಾಮಾನ್ಯ ಸೇವಾ ತಿಂಗಳನ್ನಾಗಿ ಆಚರಿಸುವ ಹಾಗೂ ವಿಶ್ವಗುರು ಬೆನೆಡಿಕ್ಟ್ XV ರವರ ಪ್ರೇಷಿತ ಪತ್ರ "ಮಾಕ್ಷಿಮುಸ್ ಇಲ್ಲುದ್"ನ ಶತಮಾನೋತ್ಸವವನ್ನು ಸ್ಮರಿಸುವ ತಮ್ಮ ಉದ್ದೇಶವನ್ನು ವ್ಯಕ್ತಪಡಿಸಿದರು. ಅದೇ ದಿವಸ ಮಾನ್ಯತ ಪಿತರು ಜನಾಂಗಗಳ ಸುವಾರ್ತಾ ಪ್ರಸಾರ ಸಮಿತಿ (CEP)ಯ ಮುಖ್ಯಸ್ಥರೂ ವಿಶ್ವಗುರುಗಳ ಸುವಾರ್ತಾ ಆಯೋಗಗಳ ಸಭೆ (PMS)ಗಳ ಸರ್ವೋಚ್ಚ ಸಮಿತಿಯ ಅಧ್ಯಕ್ಷರೂ ಆದ ಕಾರ್ಡಿನಲ್ ಫೆರ್ನಾಂಡೊ ಫಿಲೋನಿ ಅವರಿಗೆ ಪತ್ರವನ್ನು ಕಳುಹಿಸಿದರು. ಈ ಸಮಾರಂಭದ ಸಿದ್ಧತೆಯನ್ನು ವಿಶೇಷವಾಗಿ ಪ್ರತ್ಯೇಕ ಧರ್ಮಸಭೆಗಳಲ್ಲಿ ಸಮರ್ಪಿತ ಜೀವನದ ಸಂಸ್ಥೆಗಳು, ಪ್ರೇಷಿತ ಜೀವನದ ಸಂಸ್ಥೆಗಳು, ಇತರೆ ಸಭೆ, ಸಂಚಲನ, ಸಮುದಾಯ ಹಾಗೂ ಧರ್ಮಸಭೆ ಸಂಬಂಧಿತ ಅಂಗಸಂಸ್ಥೆಗಳಲ್ಲಿ ಮಾಡಬೇಕೆಂದು ವಿನಂತಿಸಿ ಅದರ ಜವಾಬ್ದಾರಿಯನ್ನು ಅವರ ವಶಕ್ಕೆ ಒಪ್ಪಿಸಿದರು.

ಧರ್ಮಸಭೆಯ ಸುವಾರ್ತಾ ಸೇವೆಯೊಂದಿಗೆ ಸಂಬಂಧಿಸಿದಂತೆ ದೈವಪ್ರಜೆಯಲ್ಲಿ ದೀಕ್ಷಾಸ್ನಾನದ ಜಾಗೃತಿಯನ್ನು ಪುನಃ ಹೊತ್ತಿಸಲು ವಿಶ್ವಗುರು ಫ್ರಾನ್ಸಿಸರು ಈ ಅಸಾಮಾನ್ಯ ಸುವಾರ್ತಾ ಸೇವಾ ತಿಂಗಳಿಗೆ ಈ ಕೆಳಗಿನ ಕ್ರಿಯಾತ್ಮಕ ವಿಷಯವನ್ನು ಸೂಚಿಸಿದರು: ದೀಕ್ಷಾಸ್ನಾನದೊಂದಿಗೆ ಸುವಾರ್ತಾ ನಿಯೋಗ: ಜಾಗತಿಕ ಸುವಾರ್ತಾ ಸೇವೆಗೆ ವಾಸ್ತವವಾಗಿ ಕ್ರಿಸ್ತರ ಧರ್ಮಸಭೆ ಮಾನವ ಜನಾಂಗಕ್ಕೆ ಸುವಾರ್ತಾ ಪ್ರಸಾರ ಜಾಗೃತಿಯನ್ನು ಪುನಃ ಎಚ್ಚರಿಸುವುದು ಮತ್ತು ಶುಭಸಂದೇಶವನ್ನು ನವೀಕೃತ ಉತ್ಸಾಹದಿಂದ ಸಾರುವ ಜವಾಬ್ದಾರಿಯನ್ನು ಪುನಶ್ಚೇತನಗೊಳಿಸುವುದು. ಈ ವಿಷಯವನ್ನೇ ವಿಶ್ವಗುರು ಬೆನೆಡಿಕ್ಟ್ XV ರವರು ಮಾಕ್ಷಿಮುಸ್ ಇಲ್ಲುದ್‌ನಲ್ಲಿ ಪಾಲನಾ ಕಾಳಜಿಯಾಗಿ ಜೊತೆಗೂಡಿಸಿದ್ದಾರೆ. ಇದನ್ನೇ ವಿಶ್ವಗುರು ಫ್ರಾನ್ಸಿಸರು "ಏವಾಂಜೆಲೀ ಗೌದಿಯುಂ"ನಲ್ಲಿ ಸುವಾರ್ತಾ ಪ್ರಸಾರದ ಸಜೀವತೆಯನ್ನಾಗಿ ವ್ಯಕ್ತಪಡಿಸಿದ್ದಾರೆ. "ಧರ್ಮಸಭೆಯ ಎಲ್ಲಾ ಚಟುವಟಿಕೆಗಳು ಸುವಾರ್ತಾ ಪ್ರಸಾರವನ್ನು ಪ್ರತಿಫಲಿಸುವ ಮಾದರಿಯಾಗಿರಬೇಕು" (EG 15)

"ಪ್ರಭು ಯೇಸುವಿನ ಸುವಾರ್ತಾ ಸೇವಾ ನಿಯೋಗ ಧರ್ಮಸಭೆಯ ಹೃದಯ ಭಾಗವಾಗಿದೆ. ಧರ್ಮಸಭೆಯ ವಿನ್ಯಾಸದಲ್ಲಿ ಅದರ ಫಲೋತ್ಪಾದನೆ, ದುಡಿಮೆಯ ಪರಿಣಾಮ, ಸೇವಾಕರ್ತರ ಪರಿಣತೆ ಮತ್ತು ಅವರು ಹೊಮ್ಮಿಸುವ ಆನಂದ ಅಳತೆಗೋಲಾಗಿರಬೇಕು. ಆನಂದವಿಲ್ಲದಿದ್ದರೆ ನಾವು ಯಾರನ್ನೂ ಆಕರ್ಷಿಸುವುದಿಲ್ಲ" (CELAM ಕಾರ್ಯ ನಿರ್ವಾಹಕ ಸಮಿತಿಯೊಂದಿಗೆ ಸಭೆ, ಬೊಗೊಟ, 7 ಸೆಪ್ಟೆಂಬರ್ 2017).

ಶಿಲುಬೆಯಲ್ಲಿ ಸತ್ತು ಪುನರುತ್ಥಾನರಾಗಿ ಧರ್ಮಸಭೆಯಲ್ಲಿ ಸಜೀವವಾಗಿರುವ ಯೇಸುಕ್ರಿಸ್ತರೊಡನೆ ವೈಯಕ್ತಿಕ ಮತ್ತು ಸಾಮೂಹಿಕ ಪರಿವರ್ತನೆ ಅಗತ್ಯ. ಆಗತಾನೇ ಅಮರ ಜೀವನ ಮತ್ತು ಪಾಸ್ಕ ಆನಂದ (ಗಮನಿಸಿ, ಲೂಕ 24:46–49) ವನ್ನು ಜಗತ್ತಿನಲ್ಲಿ ನವೀಕರಿಸುವ ತವಕ ಮತ್ತು ಉತ್ಸಾಹವನ್ನು ಕ್ರಿಸ್ತೀಯ ಜೀವನ ಸಾಕ್ಷಾತ್ಕರಿಸಬಹುದು.

ನಾಲ್ಕು ಚಟುವಟಿಕೆಗಳು: ಅಕ್ಟೋಬರ್ 2019ನ್ನು ಅಸಾಮಾನ್ಯ ಸುವಾರ್ತಾ ಪ್ರಸಾರ ತಿಂಗಳಿನಲ್ಲಿ ಅಧಿಕ ತೀವ್ರತೆಯಿಂದ ಪ್ರಯಾಣಿಸಲು ಮತ್ತು ಅದರ ಅನುಷ್ಠಾನದ ಪೂರ್ವಕ್ಕೆಗಾಗಿ ನಾಲ್ಕು ಚಟುವಟಿಕೆಗಳು ಇವು.

1. ಧರ್ಮಸಭೆಯಲ್ಲಿ ಸಜೀವವಾಗಿರುವ ಯೇಸುಕ್ರಿಸ್ತರೊಡನೆ ಮುಖಾಮುಖಿ ವೈಯಕ್ತಿಕ ಸಂಧಿ: ಪರಮ ಪ್ರಸಾದ, ದೇವರ ವಾಕ್ಯ, ವೈಯಕ್ತಿಕ ಮತ್ತು ಸಾಮೂಹಿಕ ಪ್ರಾರ್ಥನೆ.
2. ಸಾಕ್ಷ್ಯ: ಜಗತ್ತಿನಾದ್ಯಂತ ಹರಡಿರುವ ಧರ್ಮಸಭೆಯ ವಿಶ್ವಾಸದ ಕನ್ನಡಿಗಳಾಗಿರುವ ಸುವಾರ್ತಾ ಸೇವಾ ಸಂತರು, ಧರ್ಮಬಲಿಗಳು ಮತ್ತು ಧರ್ಮನಿವೇದಕರು.
3. ಸುವಾರ್ತಾ ಸೇವಾ ಶಿಕ್ಷಣ: ಬೈಬಲ್, ಧರ್ಮೋಪದೇಶ, ಆಧ್ಯಾತ್ಮಿಕ ಮತ್ತು ದೈವಶಾಸ್ತ್ರೀಯ ಅಧ್ಯಯನ.
4. ಸುವಾರ್ತಾ ಸೇವಾ ದೇಣಿಗೆ: ದಾನಧರ್ಮ, ವಸ್ತುಗಳ ಕಾಣಿಕೆ

### ಪೊಪಗಾಂಡ ಫೀದೆ ಮತ್ತು ವಿಶ್ವಗುರುಗಳ ಸುವಾರ್ತಾ ಸೇವಾ ಸಭೆಗಳು (PMS)

ಪವಿತ್ರ ಪೀಠದ ಸುವಾರ್ತಾ ಸೇವಾ ಕ್ರಿಯಾಸಮಿತಿ (ಡಿಕಾಸ್ಟರಿ) ಯನ್ನು ಹಿಂದೆ ಪ್ರೊಪಗಾಂಡ ಫೀದೆ (ಸುವಾರ್ತಾ ಪ್ರಸಾರ ಸಭೆ) ಎಂದು ಕರೆಯಲಾಗಿತ್ತು. ಅದನ್ನು ವಿಶ್ವಗುರು ಗ್ರೆಗರಿ XV, 1622 ರಲ್ಲಿ ಧರ್ಮಸಭೆಯ ಸುವಾರ್ತಾ ಪ್ರಸಾರ ಮತ್ತು ಸುವಾರ್ತಾ ಆಯೋಗದ ಕೆಲಸ ಕಾರ್ಯಗಳಲ್ಲಿ ಸಹಕಾರವನ್ನು ಪ್ರೋತ್ಸಾಹಿಸಲೂ, ಸಂಘಟಿಸಲೂ ಹಾಗೂ ನಿರ್ದೇಶಿಸಲೂ ಸ್ಥಾಪಿಸಲಾಯಿತು. ಅದನ್ನು 1967 ರಲ್ಲಿ ವಿಶ್ವಗುರು ಪೌಲ್ VI ತಮ್ಮ ಪ್ರೇಷಿತ ಸೇವೆಯನ್ನು ಸಮರ್ಥಿಸಿ, ದೃಢೀಕರಿಸುತ್ತಾ ಜನಾಂಗಗಳ ಸುವಾರ್ತಾ ಪ್ರಸಾರ ಸಮಿತಿ (CEP) ಎಂದು ಮರು ನಾಮಕರಣ ಮಾಡಿದರು. ಇಲ್ಲಿ ಕ್ರೈಸ್ತ ವಿಶ್ವಾಸದ ದೃಢತೆ ಮತ್ತು ಅಚಲತೆಯನ್ನು ನಿರಂತರ ದಾನಧರ್ಮ ವ್ಯಕ್ತಪಡಿಸುತ್ತದೆ. ದೀಕ್ಷಾಸ್ನಾನ ಪಡೆದ ಎಲ್ಲರೂ ವಿಶ್ವವ್ಯಾಪ್ತಿ ಧರ್ಮಸಭೆಯ ಪಾಲಕರಾದ ವಿಶ್ವಗುರುಗಳಿಗೆ ತಮ್ಮ ಆಧಾರವನ್ನು ನೀಡುತ್ತಾರೆ. ವಿಶ್ವಗುರುಗಳ ಸುವಾರ್ತಾ ಆಯೋಗಗಳ ಸಭೆ (PMS) ಯ ಚಾಮದಂಡ ಪ್ರಾರ್ಥನೆ, ಸ್ವತ್ತಾಗ, ನಿಸ್ವಾರ್ಥ ಭೌತಿಕ ಸಹಾಯ ಮತ್ತು ಸುವಾರ್ತಾ ಸೇವಾ ಕರೆಯೋಣಗಳು ವರ್ಷಾಂತರದಿಂದ ಹರಿದು ಬಂದಿವೆ. ಅದು 19 ಮತ್ತು 20ನೇ ಶತಮಾನಗಳಲ್ಲಿ ಶ್ರೀಸಾಮಾನ್ಯರ ಮತ್ತು ಯಾಜಕರ ಆಳವಾದ ಸುವಾರ್ತಾ ಸೇವಾ ಕಾಳಜಿಯಿಂದ ಹುಟ್ಟಿಕೊಂಡವು. ಜನಾಂಗಗಳ ಸುವಾರ್ತಾ ಪ್ರಸಾರ ಸಮಿತಿ (CEP) ಮತ್ತು ವಿಶ್ವಗುರುಗಳ ಸುವಾರ್ತಾ ಆಯೋಗಗಳ ಸಭೆ ಜೊತೆ ಜೊತೆಯಾಗಿ ಸಚೇತನಗೊಳ್ಳುತ್ತಾ "ದಾನಿಗಳಿಂದ ಭೌತಿಕ ಸಹಾಯವನ್ನು ಸುವಾರ್ತಾ ಸೇವೆಯ ಬೆಳಕಿನಲ್ಲಿ ಸಂಗ್ರಹಿಸಿ ಸಮರ್ಪಕ ವಿಧಾನದಲ್ಲಿ ವಿತರಣೆ ಮಾಡುತ್ತವೆ. ಈ ಕಾರ್ಯದಲ್ಲಿ ಅಗತ್ಯ ಮಾಹಿತಿಯನ್ನು ನೀಡುವುದರ ಮೂಲಕ ಸುವಾರ್ತಾ ಸೇವೆಯಲ್ಲಿ ಸಮಗ್ರತೆ, ಜಾಗೃತಿ ಮತ್ತು ಜವಾಬ್ದಾರಿ ವಿಶ್ವಾಸಿ ದೈವಪ್ರಜೆಯ ಸಾಮಾನ್ಯ ಜೀವನದ ಮೇಲೆ ಪ್ರಭಾವ ಬೀರಿ ಅವರನ್ನು ಸಹಭಾಗಿಗಳನ್ನಾಗಿಸುತ್ತದೆ". (ಪರಮ ವಿಶ್ವಗುರು ಫ್ರಾನ್ಸಿಸರು ವಿಶ್ವಗುರುಗಳ ಸುವಾರ್ತಾ ಸೇವಾ ಸಂಸ್ಥೆಗಳ ನಿರ್ದೇಶಕರಿಗೆ ನೀಡಿದ ಪ್ರವಚನ, ಜೂನ್ 1, 2018). "ವಿಶ್ವಗುರುಗಳ ನಾಮಾಂಕಿತ ನಾಲ್ಕು ಸಂಸ್ಥೆಗಳಾದ ವಿಶ್ವಾಸ ಪ್ರಸಾರ ಸಭೆ (PSPF), ಪ್ರೇಷಿತ ಸಂತ ಪೇತ್ರರ ಸಭೆ (PSSPA), ಎಳೆಯರ ಸುವಾರ್ತಾ ಪ್ರಸಾರ ಸಭೆ (MCA), ಮತ್ತು ಸುವಾರ್ತಾ ಪ್ರಸಾರ ಸಂಘ (PMU), ದೈವ ಪ್ರಜೆಯಲ್ಲಿ ಸಾರ್ವತ್ರಿಕ ಸುವಾರ್ತಾ ಸೇವಾ ಚೇತನವನ್ನು ಪೋಷಿಸುವ ಸಾಮಾನ್ಯ ಉದ್ದೇಶವನ್ನು

ಹೊಂದಿದೆ" (ರೆದೆಂಪ್ತೊರಿಸ್ ಮಿಸ್ಸಿಯೊ, 84).

ವಿಶ್ವಾಸ ಪ್ರಸಾರ ಸಭೆ (PSPF) ಯನ್ನು ಫ್ರಾನ್ಸಿನ ಲಯನ್ಸ್‌ನಲ್ಲಿ ಪೂಜ್ಯ ಪೌಲಿನ್ ಮೇರಿ ಜಾರಿಕೋಟ್ ಅವರು 1822 ರಲ್ಲಿ ಸ್ಥಾಪಿಸಿದರು. ಈ ಸಭೆ ಭಕ್ತ ವಿಶ್ವಾಸಿಗಳಲ್ಲಿ ಪ್ರಾರ್ಥನೆ ಮತ್ತು ಸ್ವತ್ಯಾಗವನ್ನು ಪೋಷಿಸುತ್ತಾ ಸುವಾರ್ತಾ ಸೇವೆಗೆ ಭೌತಿಕ ವಸ್ತುಗಳನ್ನು ಕೊಡುಗೆಯನ್ನು ಪ್ರೋತ್ಸಾಹಿಸುತ್ತಾ, ಜನಾಂಗಗಳ ಸೇವೆಗಾಗಿ ಪುರುಷರು ಮತ್ತು ಸ್ತ್ರೀಯರು ತಮ್ಮ ಜೀವನವನ್ನು ಮುಡುಪಾಗಿಡುವಂತೆ ಪ್ರಭುವನ್ನು ವಿನಂತಿಸುತ್ತವೆ.

ಎಳೆಯರ ಸುವಾರ್ತಾ ಪ್ರಸಾರ ಸಭೆ (MCA) ಯನ್ನು ಅಂದಿನ ನ್ಯಾನ್ಸಿಯ (ಫ್ರಾನ್ಸ್) ಧರ್ಮಾಧ್ಯಕ್ಷರಾದ ಅತಿ ವಂದನೀಯ ಚಾರ್ಲ್ಸ್ ಅಗಸ್ಟೆ ದೆ ಫೋರ್ಬಿನ್-ಜಾನ್ಸನ್ ಅವರು ವಿಧಿಯುಕ್ತವಾಗಿ 1843 ರಲ್ಲಿ ಸ್ಥಾಪಿಸಿದರು. ಈ ಸಭೆ ಜಗತ್ತಿನಾದ್ಯಂತ ಹರಡಿರುವ ಮಕ್ಕಳನ್ನು ವಿಶ್ವಾಸದಲ್ಲಿ ತಮ್ಮೊಂದಿಗೆ ಒಂದಾಗಿರುವ ಸಮಾನ ಅಂತಸ್ತಿನವರಿಗೆ ದಾನಧರ್ಮ ಮತ್ತು ಪ್ರಾರ್ಥನೆಯ ಮುಖಾಂತರ ನೆರವನ್ನು ನೀಡುತ್ತದೆ. ಹಂಚಿಕೊಳ್ಳುವ ಈ ಸಭೆಯ ಘೋಷವಾಕ್ಯ: "ಮಕ್ಕಳ ನೆರವಿಗೆ ಮಕ್ಕಳು".

ವಿಶ್ವಗುರುಗಳ ಪ್ರೇಷಿತ ಸಂತ ಪೇತ್ರರ ಸಭೆ (PSSPA) ಯನ್ನು ಫ್ರಾನ್ಸಿನ ಸೇನ್ ಎಂಬಲ್ಲಿ ಜೀಯನ್ ಮತ್ತು ಸ್ಟೇಫನಿ ಬಿಗಾರ್ಡ್ ಅವರಿಂದ 1889ರಲ್ಲಿ ಸ್ಥಾಪಿಸಲಾಯಿತು. ಈ ಸಂಸ್ಥೆ ಪ್ರಾರ್ಥನೆ ಮತ್ತು ಲೌಕಿಕ ಕೊಡುಗೆಗಳ ಮುಖಾಂತರ ಜನರೊಡನೆ ಸಹಕರಿಸುತ್ತಾ ಪ್ರೇರಣೆಯನ್ನು ನೀಡುತ್ತಾ ಸುವಾರ್ತಾ ಸೇವೆಯನ್ನು ಸಂಘಟಿಸುತ್ತದೆ. ಈ ಸಭೆಯ ಉದ್ದೇಶ, ಭವಿಷ್ಯದ ಗುರುಗಳ ತರಬೇತಿ, ಸಮರ್ಪಿತ ಜೀವನಕ್ಕೆ ಅಭ್ಯರ್ಥಿಗಳ ಆಯ್ಕೆ ಮತ್ತು ಸುವಾರ್ತಾ ಸೇವಾ ದೇಶಗಳ ಎಳೆಯ ಧರ್ಮಸಭೆಗಳ ತರಬೇತಿದಾರರಿಗೆ ನೆರವು.

ವಿಶ್ವಗುರುಗಳ ಸುವಾರ್ತಾ ಪ್ರಸಾರ ಸಂಘ (PMU) ಹೊರ ದೇಶಗಳಲ್ಲಿದ್ದ ವಿಶ್ವಗುರುಗಳ ಸುವಾರ್ತಾ ಸಂಸ್ಥೆಯ ಪೌಲೊ ಮನ್ನ ಎಂಬ ಮನೀತರಿಂದ ಪ್ರಾರಂಭವಾಯಿತು. ವಿಶ್ವಗುರು ಬೆನೆಡಿಕ್ಟ್ XV ಅವರು 1916ರಲ್ಲಿ ಅದನ್ನು ಅನುಮೋದಿಸಿದರು. ಇತರ ಮೂರು ಸುವಾರ್ತಾ ಸಭೆಗಳ ಆತ್ಮವೆಂದು ಪರಿಗಣಿಸಲಾದ ಈ ಸಂಸ್ಥೆ ಧರ್ಮಸಭೆಯಲ್ಲಿ ಸುವಾರ್ತಾ ಪ್ರಸಾರ ಸೇವೆಗೆ ಪ್ರಚೋದನೆಯನ್ನೀಯುತ್ತದೆ, ಸುವಾರ್ತಾ ಪ್ರಸಾರಕರ ತರಬೇತಿಗೆ ನೆರವನ್ನೀಯುತ್ತದೆ ಮತ್ತು ಕ್ರೈಸ್ತ ಸಮುದಾಯಗಳಲ್ಲಿ ಈ ಸೇವೆಗೆ ಸಹಕಾರವನ್ನೀಯುತ್ತದೆ. ಈ ಸಂಸ್ಥೆ ಪ್ರಾರ್ಥನೆಯ ಉದ್ದೇಶವನ್ನು ಹೊಂದಿದ್ದು ಸುವಾರ್ತಾ ಪ್ರಸಾರ ಚಟುವಟಿಕೆಗಳನ್ನು ಇಂದ್ರಿಯಗಳಿಗೆ ಗೋಚರವಾಗುವಂತೆ ಅವನ್ನು ನಿರ್ದೇಶಿಸುತ್ತದೆ.


**ವರ್ಷ 2022 : ಧರ್ಮಸಭೆಯ ಸುವಾರ್ತಾ ಸೇವಾ ವಾರ್ಷಿಕ ದಿನಗಳು**

2022 ರಲ್ಲಿ ಅನೇಕ ಪ್ರಮುಖ ವಾರ್ಷಿಕೋತ್ಸವಗಳನ್ನು ಆಚರಿಸಲಾಗುವುದು. ಜನಾಂಗಗಳ ಸುವಾರ್ತಾ ಪ್ರಸಾರ ಸಮಿತಿ (CEP) ಸ್ಥಾಪನೆಗೊಂಡು 400 ವರ್ಷಗಳಾಗುತ್ತದೆ. ವಿಶ್ವಾಸ ಪ್ರಸಾರ ಸಭೆ (PSPF)ಗೆ 100 ವರ್ಷಗಳಾಗುತ್ತದೆ. ಮೂರು ಸುವಾರ್ತಾ ಪ್ರಸಾರ ಸಭೆಗಳು (PSPF, MCA, PSSPA) ವಿಶ್ವಗುರುಗಳಿಂದ ಸಾರ್ವತ್ರಿಕ ಮನ್ನಣೆಯನ್ನು ಪಡೆದುಕೊಂಡಿವೆ. ದೇವರ ಪರಾಮರಿಕೆಯಿಂದ ಈ ವಾರ್ಷಿಕೋತ್ಸವಗಳು ಧರ್ಮಸಭೆಯಲ್ಲಿ ದೀಕ್ಷಾಸ್ನಾನದ ಜಾಗೃತಿಯನ್ನು ಸಜೀವಗೊಳಿಸಿ ಕ್ರಿಯಾತ್ಮಕಗೊಳಿಸುವ ಅವಕಾಶವನ್ನು ಕಲ್ಪಿಸಿಕೊಡುತ್ತವೆ. ಒಂದು ವೇಳೆ ಸುವಾರ್ತಾ ನಿಯೋಗದಲ್ಲಿ ಬಿಕ್ಕಟ್ಟು ಉಂಟಾದರೆ ಅದು ವಿಶ್ವಾಸದ ಕೊರತೆಯಿಂದಾಗುತ್ತದೆ. ಆದರೆ ಧರ್ಮಸಭೆಯ ವಿಶ್ವಾಸ ಭೀತಿರಹಿತವಾಗಿ ಸುವಾರ್ತಾ ನಿಯೋಗದಲ್ಲಿ ಎಲ್ಲರನ್ನು ಮತ್ತು ಎಲ್ಲವನ್ನು ಕ್ರಿಸ್ತರೆಡೆಗೆ ಆಕರ್ಷಿಸುವ ನಂಬಿಕೆಯನ್ನು ಹೊಂದಿದೆ. ಮುಂದೆ ಬರಲಿರುವ ಅಸಾಮಾನ್ಯ ಸೇವಾ ನಿಯೋಗದ ತಿಂಗಳು ವಾಸ್ತವವಾಗಿ ಒಂದು ಸಾಹಸಕ್ಕೆ ನಾಂದಿಯಾಗಿದ್ದು ವಿಶ್ವಾಸ, ಪ್ರಾರ್ಥನೆ, ಚಿಂತನೆ ಮತ್ತು ದಾನಧರ್ಮಕ್ಕೆ ಅವಕಾಶ ಮಾಡಿಕೊಡುತ್ತದೆ. ಅಕ್ಟೋಬರ್ 2019ರಲ್ಲಿ ಈ ತಿಂಗಳು ಅಂತ್ಯವಾಗದೆ ಸೂಕ್ತ ವಿಧಾನಗಳ ಅಳವಡಿಕೆ, ಉತ್ಸಾಹ ಮತ್ತು ಸಮರ್ಪಣೆಯ ಮುಖಾಂತರ ಜನಾಂಗಗಳ ಸುವಾರ್ತಾ ಸೇವಾ ಕಾರ್ಯಕ್ಕೆ ಮತ್ತು ಧರ್ಮಸಭೆಯಲ್ಲಿ ಸುವಾರ್ತಾ ಪ್ರಸಾರ ಸ್ವಭಾವಕ್ಕೆ ನವ ಚಾಲನೆ ಮತ್ತು ಮಾದರಿಯಾಗಬಹುದು.

**ಕನ್ನಡನುವಾದ : ಸ್ವಾಮಿ ಜಾರ್ಜ್ ಡಿ'ಸೋಜ**
**ಚಿಕ್ಕಮಗಳೂರು ಧರ್ಮಕ್ಷೇತ್ರ**


For more information contact us at:
**PONTIFICAL MISSION ORGANIZATIONS (INDIA)**
No. 10, 3rd Cross, Ulsoor Road, Bangalore - 560042, Karnataka, INDIA.
Tel: +91 80 2558 5946
Email: pmorgbindia@gmail.com, Website: www.pmoinindia.org


**Congregation for the Evangelization of Peoples**
**Pontifical Mission Societies**



# THE CHURCH OF CHRIST ON MISSION IN THE WORLD

EXTRAORDINARY MISSIONARY MONTH
October 2019